ಸಾಕ್ಷಿಯನ್ನು ದಿಃ 25-03-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಎಫ್ ಡಿ ವಕೀಲರಿಂದ (ವಾದಿ ಪರವಾಗಿ)**

ಆರ್ ಸಿ ಸಿ ಮನೆಯನ್ನು 5-6 ವರ್ಷಗಳ ಹಿಂದೆ ಕಟ್ಟಲಾಗಿದೆ. ಸದರಿ ಮನೆಯನ್ನು ನಾವೇ ಕಟ್ಟಿಸಿದ್ದೇವೆ. ಸದರಿ ಮನೆಯನ್ನು ವಾದಿಯರು ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡ ಕ್ಯಾನ್ಸರ್ ಕಾಯಿಲೆಯಿಂದ ತೀರಿಕೊಂಡಿದ್ದಾರೆ. ಅವರು ನಾನೇ ಜೋಪಾನ ಮಾಡಿದ್ದೇನೆ. ನನ್ನ ಗಂಡನನ್ನು ವಾದಿಯರು ಜೋಪಾನ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡ ಸಹ 4 ನೇ ವಾದಿಯ ಮನೆಯಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಅತ್ತೆ ತೀರಿಕೊಂಡ ದಿನಾಂಕ ನೆನಪಿಲ್ಲ. ನಮ್ಮ ಅತ್ತೆಯನ್ನು ನಾನೇ ಜೋಪಾನ ಮಾಡುತ್ತಿದ್ದೆ ಮಲ್ಲಮ್ಮನ ಗಂಡ ತೀರಿಕೊಂಡ ನಂತರ ಅವರು ನಮ್ಮ ಅತ್ತೆಯನ್ನು ಕರೆದುಕೊಂಡು ಹೋದರು ಎಂದು ಹೇಳುತ್ತಾರೆ. ಮೊದಲಿನಿಂದಲೂ ನಾನು ನಮ್ಮ ಅತ್ತೆಯನ್ನು ನೋಡಿಕೊಳ್ಳದ ಕಾರಣ ವಾದಿಯರೇ ಅವರನ್ನು ಜೋಪಾನ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಅತ್ತೆ ನಮ್ಮ ಮನೆಯಲ್ಲಿಯೇ ತೀರಿಕೊಂಡಿದ್ದಾರೆ. ನಮ್ಮ ಅತ್ತೆ 4 ನೇ ವಾದಿಯ ಮನೆಯಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ನನ್ನ ಗಂಡ ದಾವಾ ಜಮೀನನ್ನು ಭಜಂತ್ರಿ ಎನ್ನುವವರಿಗೆ ಒತ್ತಿ ಹಾಕಿದ್ದರು. ನಾನು ಎರಡು ಎಕರೆ ಜಮೀನು ಮಾರಿ ಉಳಿದ ಜಮೀನನ್ನು ಬಿಡಿಸಿಕೊಂಡಿದ್ದೇನೆ ಎಂದು ಹೇಳುತ್ತಾರೆ. ಸದರಿ ಜಮೀನಿನ ಮೇಲಿದ್ದ ಸಾಲವನ್ನು ವಾದಿಯರು ತೀರಿಸಿ ಅದನ್ನು ಬಿಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡ ಜಮೀನು ಒತ್ತಿ ಹಾಕಿದ ದಿನಾಂಕ ನೆನಪಿಲ್ಲ. ಆ ಸಮಯದಲ್ಲಿ ಪ್ರಭು 11 ವರ್ಷದವನಿದ್ದ. ವಾದಿಯರು ಜಮೀನಿನ ಮೇಲಿನ ಸಾಲ ತೀರಿಸಿದ ವಿಷಯ ಗೊತ್ತಿದ್ದರೂ ಸಹ ನಾನೇ ತೀರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜು @ ಯಲ್ಲಪ್ಪ ತೀರಿಕೊಂಡ ನಂತರ ನಾನು ವಾರಸಾ ಅರ್ಜಿ ಸಲ್ಲಿಸಿದಾಗ ವಾದಿಯರು ತಕರಾರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಮ್ಮ ಅತ್ತೆ ಪಾರ್ವತೆಮ್ಮ ದಾವಾ ಆಸ್ತಿಗಳನ್ನು ನನ್ನ ಗಂಡನ ಹೆಸರಿಗೆ ಬಿಟ್ಟುಕೊಟ್ಟಿದ್ದರು ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ನಮ್ಮ ಅತ್ತೆಗೆ ಹೊಡೆಬಡೆ ಮಾಡಿ ಒತ್ತಾಯದಿಂದ ಸಹಿ ಪಡೆದುಕೊಂಡು ಹಕ್ಕುಬಿಟ್ಟ ಪತ್ರ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರಿಗೆ ನಮ್ಮ ಅತ್ತೆ ದಾವಾ ಆಸ್ತಿಗಳನ್ನು ಮಾಡುವಾಗ ವಾದಿಯರು ಎಷ್ಟು ವಯಸ್ಸಾಗಿತ್ತು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆ ಸವಯದಲ್ಲಿ ಎಲ್ಲಾ ವಾದಿಯರ ಮದುವೆಯಾಗಿತ್ತು ಎಂದು ಹೇಳುತ್ತಾರೆ. ನಮ್ಮ ಅತ್ತೆ ತನ್ನ ಆಸ್ತಿಗಳನ್ನು ನನ್ನ ಗಂಡನ ಹೆಸರಿಗೆ ಮಾಡಿದಾಗ ನನ್ನ ಮದುವೆಯಾಗಿರಲಿಲ್ಲ. ನನ್ನ ಗಂಡನ ಹೆಸರಿಗೆ ಆಸ್ತಿಗಳನ್ನು ಮಾಡುವಾಗ ಏನೇನು ನಡೆದಿದೆ ನನಗೆ ಗೊತ್ತಿಲ್ಲ ಎಂದರೆ ಆ ಬಗ್ಗೆ ನನಗೆ ನನ್ನ ಗಂಡ ಹೇಳಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳನ್ನು ಬಿಟ್ಟುಕೊಡಲು ನಮ್ಮ ಅತ್ತೆಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿನ ವಾದಿಯರ ಹಕ್ಕನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ ನಂ.5 ಗೈರು ಹಾಜರಿರುವುದರಿಂದ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿ)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.